ಸಾಕ್ಷಿಯನ್ನು ದಿನಾಂಕಃ 06/03/2025 ರಂದು ಕರೆಯಿಸಿ ಸತ್ಯ ಪ್ರತಿಜ್ಞೆಯ ಮೇಲೆ ಪ್ರಮಾಣೀಕರಿಸಲಾಯಿತು.

**ಮುಖ್ಯ ವಿಚಾರಣೆಃ- ಅರ್ಜಿದಾರ ಪರ ವಕೀಲರಿಂದಃ**

ನಾನು ಈ ಪ್ರಕರಣದಲ್ಲಿ ಅರ್ಜಿದಾರ ನಂ.2 ಇರುತ್ತೇನೆ. ನಾನು ಇಂದು ಮುಖ್ಯ ವಿಚಾರಣೆಯ ಹೇಳಿಕೆಗಳನ್ನು ಪ್ರಮಾಣ ಪತ್ರದ ಮೂಲಕ ಸಲ್ಲಿಸಲ್ಲಿದ್ದೇನೆ, ಸದರಿ ಪ್ರಮಾಣ ಪತ್ರದಲ್ಲಿ ಇರುವಂತಹ ಮಾಹಿತಿಗಳು ನನ್ನ ಹೇಳಿಕೆಯ ಮೇರೆಗೆ ತಯಾರಿಸಲಾಗಿದ್ದು ಅದರಲ್ಲಿ ಬರೆದಂತಹ ಎಲ್ಲ ಮಾಹಿತಿಗಳು ನಿಜವಿರುತ್ತದೆ ಎಂದು ತಿಳಿದು ನಾನು ನನ್ನ ಸಹಿ ಮಾಡಿರುತ್ತೇನೆ.

<u>**ನಾನು ಇಂದು ಈ ಕೆಳಗಿನ ದಾಖಲೆಗಳನ್ನು ಹಾಜರು ಪಡಿಸಿರುತ್ತೇನೆ**</u>

ದೀಲಿಪ್ ರವರ ಗಾಯದ ಪ್ರಮಾಣ ಪತ್ರದ ದೃಢೀಕೃತ ನಕಲನ್ನು ನಿಪಿಃ 8 ಎಂದು ಗುರುತಿಸಲಾಯಿತು.

**ಮುಂದಿನ ಮುಖ್ಯ ವಿಚಾರಣೆ ಇಲ್ಲ ಎಂದು ಹೇಳಿರುತ್ತಾರೆ.**

**ಪಾಟೀ ಸವಾಲುಃ- 4 ನೇ ಎದುರುದಾರ ಪರ ವಕೀಲರಿಂದಃ**

ಈ ಪ್ರಕರಣದಲ್ಲಿ ಹಾಕಿರುವ ಕಾಗದ ಪತ್ರದ ಬಗ್ಗೆ ನನಗೆ ಮಾಹಿತಿ ಇದೆ. ಅಪಘಾತದ ಬಗ್ಗೆ ನಾನೇ ದೂರನ್ನು ನೀಡಿದ್ದೇನೆ. ದುರ್ಗಪ್ಪ ನನ್ನ ತಮ್ಮ. ಮೋಟರ ಸೈಕಲ ನಂ. ಕೆಎ 37/ಇಬಿ-0741 ಅಪಘಾತದ ದಿನ ದುರ್ಗಪ್ಪ ಚಲಾಯಿಸುತ್ತಿದ್ದ. ಮೋಟರ ಸೈಕಲನ ಮಾಲೀಕನ ಹೆಸರು ಮೈಲಾರಿ. ಸದರಿ ಮೋಟರ ಸೈಕಲನಲ್ಲಿ ಒಟ್ಟು 5 ಜನ ಹೋಗುತ್ತಿದ್ದೀರಿ ಎಂದರೆ ಸರಿ. ಪೊಲೀಸರು ತನಿಖೆ ಮಾಡಿ ಎರಡು ವಾಹನದ ವಿರುದ್ಧ ಚಾರ್ಜಶೀಟ್ ಸಲ್ಲಿಸಿದ್ದಾರೆ ಎಂದರೆ ಸರಿ. ಸಾಕ್ಷಿ ಮುಂದುವರೆದು ನಮ್ಮ ವಾಹನದ ಚಾಲಕನ ಯಾವುದೇ ತಪ್ಪಿಲ್ಲ, ಕೆಎ 26/ ಎಫ್ -0196 ಈ ವಾಹನದ ಚಾಲಕನು ನಮಗೆ ಬಂದು ಹೊಡೆದಿದ್ದಾನೆ ಎಂದು ಹೇಳುತ್ತಾರೆ. ದುರ್ಗಪ್ಪನಿಗೆ ವಾಹನ ಚಾಲನೆ ಮಾಡಲು ಲೈಸನ್ಸ ಇರಲಿಲ್ಲ ಎಂದರೆ ಸರಿ. ಮಗಳಿಗೆ ವೈದ್ಯಕೀಯ ಖರ್ಚು 1 ಲಕ್ಷ ಆಗಿದೆ ಎಂದು ಸುಳ್ಳು ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ. ಖುಷಿ ಅಂಗನವಾಡಿಗೆ ಹೋಗುತ್ತಿದ್ದಳು.

ದುರ್ಗಪ್ಪ ಲೈಸನ್ಸ ಇಲ್ಲದೆ ಗಾಡಿ ಹೊಡೆದಿದ್ದರಿಂದ 4 ನೇ ಎದುರುದಾರರು ಪರಿಹಾರ ಕೊಡಲು ಭಾದ್ಯಸ್ಥರಲ್ಲ , ಆದರೆ ಬೇರೆ ಇನ್ಸುರೆನ್ಸ ಕಂಪನಿಯವರು ಪರಿಹಾರ ಕೊಡಲು ಭಾದ್ಯಸ್ಥರಾಗಿದ್ದಾರೆ ಎಂದರೆ ಸಾಕ್ಷಿ ಇಬ್ಬರು ಭಾದ್ಯಸ್ಥರಾಗಿದ್ದಾರೆ ಎಂದು ಹೇಳುತ್ತಾರೆ.

ದೀಲಿಪ್ ರವರು 6 ನೇ ತರಗತಿ ಓದುತ್ತಿದ್ದರು. ಅವರ ವೈದ್ಯಕೀಯ ಖರ್ಚು 2 ಲಕ್ಷ ಆಗಿದೆ ಎಂದು ಸುಳ್ಳು ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ.

ಕವಿತಾ 2 ನೇ ತರಗತಿ ವ್ಯಾಸಂಗ ಮಾಡುತ್ತಿದ್ದಳು. ಅವರ ವೈದ್ಯಕೀಯ ಖರ್ಚು ಸಹ 2 ಲಕ್ಷ ಆಗಿದೆ ಎಂದು ಸುಳ್ಳು ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ.

**ಮುಂದಿನ ಪಾಟೀ ಸವಾಲು ಇಲ್ಲ ಎಂದು ಹೇಳಿರುತ್ತಾರೆ.**

**ಪಾಟೀ ಸವಾಲುಃ- 1 ನೇ ಎದುರುದಾರ ಪರ ವಕೀಲರಿಂದಃ**

ನಿಮ್ಮ ಮಗಳಿಗೆ 10 ವರ್ಷ ವಯಸ್ಸಾಗಿತ್ತು ಎಂದು ತೋರಿಸಲು ನ್ಯಾಯಾಲಯಕ್ಕೆ ದಾಖಲೆ ಹಾಜರು ಮಾಡಿದ್ದೀರಾ ಎಂದರೆ ಸಾಕ್ಷಿ ಮಾಡಿದ್ದೇನೆಂದು ಹೇಳುತ್ತಾರೆ. ನೀವು ಯಾವುದೇ ದಾಖಲೆ ಹಾಜರು ಮಾಡಿಲ್ಲ ಸುಳ್ಳು ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ. ಅದೇ ರೀತಿ ನಿಮ್ಮ ಮಗಳಿಗೆ ಮತ್ತು ಮಗನಿಗೆ 2 ಲಕ್ಷ ಮತ್ತು 1 ಲಕ್ಷ ಖರ್ಚು ಮಾಡಿದ್ದೀರಿ ಎಂದು ಸುಳ್ಳು ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ. ದುರ್ಗಪ್ಪ ನ ಮೇಲೆ ಕ್ರಿಮಿನಲ್ ಪ್ರಕರಣ ನೆಡೆಯುತ್ತದೆ ಎಂದರೆ ನನಗೆ ಗೊತ್ತಿಲ್ಲ. ಆ ದಿನ ಕೆಎ 26/ ಎಫ್ -0196 ರ ಚಾಲಕನಿಗೆ ಚಾಲನಾ ಪರವಾನಿಗೆ ಪತ್ರ ಮತ್ತು ಇನ್ಸುರೆನ್ಸ ಪಾಲಿಸಿ ಇತ್ತು, ಆದ್ದರಿಂದ ಅದರ ವಿಮೆ ಕಂಪನಿಯವರು ಪರಿಹಾರು ಕೊಡಲು ಭಾದ್ಯಸ್ಥರಾಗಿದ್ದಾರೆ ಎಂದರೆ ಸಾಕ್ಷಿ ಇಬ್ಬರು ಭಾದ್ಯಸ್ಥರಾಗಿದ್ದಾರೆ ಎಂದು ಹೇಳುತ್ತಾರೆ. ಸದರಿ ಅಪಘಾತ ದುರ್ಗಪ್ಪನ ನಿರ್ಲಕ್ಷ್ಯತನದಿಂದ ಈ ಅಪಘಾತ ಆಗಿದ್ದರೂ ಸಹಿತ 1 ನೇ ಎದುರುದಾರನ ಮೇಲೆ ಸುಳ್ಳು ಪ್ರಕರಣ ದಾಖಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ.

**ಮುಂದಿನ ಪಾಟೀ ಸವಾಲು ಇಲ್ಲ ಎಂದು ಹೇಳಿರುತ್ತಾರೆ.**

**2 ಮತ್ತು 3 ನೇ ಎದುರುದಾರ ಪರ ವಕೀಲರು ನ್ಯಾಯಾಲಯದಲ್ಲಿ ಗೈರು ಹಾಜರಾಗಿರುವುದರಿಂದ ಪಾಟಿ ಸವಾಲಿಗೆ ಕಾಲವಕಾಶ ನೀಡಿ ಪ್ರಕರಣವನ್ನು ಮುಂದೂಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯು ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸರಿ ಇದೆ.

(ಶ್ರೀಮತಿ ಪಿ. ಆರ್ ಪಾಟೀಲ)
06.03.2025
**ಅಧಿಕ ಹಿರಿಯ ದಿವಾಣಿ ನ್ಯಾಯಾಧೀಶರು, ಗದಗ**